**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 02.04.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರವರ ಪರ ಶ್ರೀ PMV ವಕೀಲರಿಂದ :**

ಈ ದಾವೆಯ ಉಳಿದ ವಾದಿಯರು ತಮ್ಮ ಪರವಾಗಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರ ನೀಡಿರುವರು. ನನ್ನನ್ನು ಹೊರಡು ಪಡಿಸಿ ಉಳಿದ ವಾದಿಯರು ಯಾವ ಯಾವ ಸರ್ವೇ ನಂಬರ್ ನ ಮಾಲೀಕರು ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ, ಆದರೆ ಅವರು ಹೊಂದಿರುವ ವಿಸ್ತೀರ್ಣ ವನ್ನು ನನಗೆ ಹೇಳಲು ಬರುತ್ತದೆ./ ಉಳಿದ ವಾದಿಯರು ಮಾಲೀಕತ್ವ ಹೊಂದಿರುವ ಜಮೀನಿನ ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ, ಆದರೆ ಇವರು ಮಾಲೀಕರು ಆಗಿರುವ ಜಮೀನು ಯಾವ ಏರಿಯಾದಲ್ಲಿ ಇದೆ ಎಂದು ನಾನು ಹೇಳುತ್ತೆನೆ. ಈ ದಾವೆ ದಾಖಲು ಮಾಡಲು ನಾನು ಮತ್ತು ಉಳಿದ ವಾದಿಯರು ಕೂಡಿಕೊಂಡು ವಕೀಲರಿಗೆ ಮಾಹಿತಿ ನೀಡಿರುವೆವು. ವಾದ ಪತ್ರದ ಜೊತೆ ಹಾಜರು ಪಡಿಸಿರುವ ಕಚ್ಚಾ ನಕಾಶೆಯಲ್ಲಿ ನನ್ನ ಮತ್ತು ಉಳಿದ ವಾದಿಯರು ಜಮೀನು ಯಾವ ಜಾಗದಲ್ಲಿ ಇರುವ ಬಗ್ಗೆ ಈ ನಕಾಶೆಯಲ್ಲಿ ತೋರಿಸಿರುವುದಿಲ್ಲ. ಪ್ರತಿವಾದಿ 1 ರವರು ನಮ್ಮ ಜಮೀನಿಗೆ ನೀರು ತೆಗದುಕೊಂಡು ಹೋಗಲು ಪೈಪ್ ನ್ನು ಅಳವಡಿಸಲು ಅನುಮತಿಯನ್ನು 2014 ರ ಸಾಲಿನಲ್ಲಿ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುವರು ಆದರೆ ಯಾವ ದಿನಾಂಕ ಮತ್ತ ತಿಂಗಳು ಎಂಬ ಬಗ್ಗೆ ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಪ್ರತಿವಾದಿ 1 ರವರು 2006 ರಿಂದ 2007 ರ ಅವಧಿಯಲ್ಲಿ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುವರು. ಉಳಿದ ವಾದಿಯರಿಗೆ ಪ್ರತಿವಾದಿ 1 ರವರು ಬರೆದುಕೊಟ್ಟಿರುವ ಒಪ್ಪಿಗೆ ಪತ್ರದ ಬಗ್ಗೆ ಕೆಲವೊಂದು ಗೊತ್ತಿದೆ ಕೆಲವೊಂದು ಗೊತ್ತಿರುವುದಿಲ್ಲ.

2. ಸರ್ವೇ ನಂಬರ್ 83/2 ಮೂಲತಹ ಪ್ರತಿವಾದಿ 1 ರವರು ಮಾಲೀಕತ್ವದ ಜಮೀನು ಎಂದರೆ ಸರಿ. ಪ್ರತಿವಾದಿ 1 ರವರು ಸಲ್ಲಿಸಿದ ಲಿಖಿತ ಪತ್ರದ ಜೊತೆ ಹಾಜರು ಪಡಿಸಿರುವ ಕಚ್ಚಾ ನಕಾಶೆಯ ಪ್ರಕಾರ ಜಿ ಹೆಚ್ ಐ ಡಿ ಎಂಬ ಅಕ್ಷರದ ಜಮೀನಿನ ಮದ್ಯ ಭಾಗದ ಮೂಲಕ

ಪೈಪ್ ಲೈನ್ ವನ್ನು ಹಾಕಿಕೊಂಡು ಹೋಗಲು ಪ್ರತಿವಾದಿ 1 ರವರು ಒಪ್ಪಿಗೆ ಪತ್ರ ಬರೆದುಕೊಟ್ಟಿರುವರ ಎಂದರೆ ಸರಿಯಲ್ಲ. ಅಲ್ಲಿ ಕೇವಲ ರಸ್ತೆ ಇರುವುದು ಎಂದು ಅವರು ಒಪ್ಪಿಗೆ ನೀಡಿರುವರು, ಆದರೆ ಅವರು ಸದರಿ ಕಚ್ಚಾ ನಕಾಶೆಯಲ್ಲಿ ನ ಜಿ ಹೆಚ್ ಐ ಡಿ ಅಕ್ಷರಗಳಿಂದ ಗುರುತಿಸಿರುವ ಜಮೀನಿನ ಮಧ್ಯ ಭಾಗದಲ್ಲಿ ಮೂಲಕ ಜಮೀನಿನಲ್ಲಿ ನೀರಿನ ಪೈಪ್ ನ್ನು ಹಾಕಿಕೊಂಡು ಹೋಗಲು ಒಪ್ಪಿಗೆ ನೀಡಿರುವರು.

3. ಪ್ರತಿವಾದಿ 1 ಮತ್ತು 2 ರವರ ಮಧ್ಯೆ ಪಾಲು ವಾಟ್ನಿ ಆಗಿದೆ ಎಂದರೆ ಸರಿ. ಸರ್ವೇ ನಂಬರ್ 83/2 ಎ ವಿಸ್ತೀರ್ಣ 2 ಎಕರೆ 1 ಗುಂಟೆಯ ಪಶ್ಚಿಮ ಭಾಗದ ಜಮೀನು ಪ್ರತಿವಾದಿ 1 ರವರ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ಈ ಜಮೀನಿನ ಪೂರ್ವ ಭಾಗದ 5 ಎಕರೆ 20 ಗುಂಟೆ ಜಮೀನು ಪ್ರತಿವಾದಿ 2 ರವರ ಪಾಲಿಗೆ ಬಂದಿದೆ ಎಂದರೆ ಸರಿ. ಪ್ರತಿವಾದಿ 2 ರವರು ತಮ್ಮ ಪಾಲಿನ 5 ಎಕರೆ 20 ಗುಂಟೆ ಜಮೀನನ್ನು ಬಸಪ್ಪ ಅಡವಿಗೆ ಮಾರಾಟ ಮಾಡಿರುವರು ಎಂದರೆ ಸರಿ. ಇವರು ಮೃತ ಪಟ್ಟ ನಂತರ ವಾರಸಾನಾಯಿಂದ ಪ್ರತಿವಾದಿ 3 ರಿಂದ 5 ರವರು ತಮ್ಮ ಹೆಸರನ್ನು ದಾಖಲು ಮಾಡಿಕೊಂಡಿರುವರು ಎಂದರೆ ಸರಿ. ಈ ನೀರನ್ನು ತೆಗೆದುಕೊಂಡು ಹೋಗಲು ಮತ್ತು ದಾರಿಯನ್ನು ಉಪಯೋಗಿಸಲು ಪ್ರತಿವಾದಿ 1 ಮತ್ತು 2 ರವರು ಯಾವುದೇ ಕಾಲಕ್ಕೂ ತೊಂದರೆ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 3 ರಿಂದ 5 ರವರು ಈಗ ನಮಗೆ ತೊಂದರೆ ಮಾಡುತ್ತಿರುವರು.

4. ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿ 1 ಮತ್ತು 2 ರವರು ನಮ್ಮ ದಾರಿಯ ಹಕ್ಕಿಗೆ ಮತ್ತು ಪೈಪ್ ಲೈನ್ ಮೂಲಕ ನೀರುತೆಗೆದುಕೊಂಡು ಹೋಗಲು ಹರಕತ್ ಮಾಡಿದಾಗಿ ಎಂದು ಹೇಳಿ ಬರೆಸಿರುವೆನು. ಲಿಖಿತ ಪತ್ರದ ಕಚ್ಚಾ ನಕಾಶೆಯಲ್ಲಿ ತೋರಿಸಿರುವಂತೆ ಜೆ ಕೆ ಎಲ್ ಎಂ ಎಂಬ ಅಕ್ಷರದ ರಸ್ತೆಯ ಗುಂಟ ಪ್ರತಿವಾದಿ 1 ರವರು ಮುಖ್ಯ ರಸ್ತೆಯಾದ ಎ ಬಿ ಸಿ ಎಫ್ ರಸ್ತೆಗೆ ಬರುತ್ತಾರೆ ಎಂದರೆ ಸರಿ. ಈ ರಸ್ತೆಯ ಬಗ್ಗೆ ಪ್ರತಿವಾದಿ 1 ಮತ್ತ 2 ರವರು ವಾಟ್ನಿ ಮಾಡಿಕೊಂಡ ಸಮಯದಲ್ಲಿ ಎ ಬಿ ಸಿ ಎಫ್ ಅಕ್ಷರದ ರಸ್ತೆಯ ಬಗ್ಗೆ ಹೇಳಿರವರು ಎಂದರೆ ಸರಿ. ಪ್ರತಿವಾದಿ 1 ರವರು ಎ ಬಿ ಸಿ ಡಿ ಇ ಎಫ್ ರಸ್ತೆಯ ಮೂಖಾಂತರವೇ ಮುಖ್ಯ ರಸ್ತೆಗೆ ಸೇರುತ್ತಾರೆ ಎಂದರೆ ಸರಿ. ನಮಗೆ ಪ್ರತಿವಾದಿ 3 ರಿಂದ 5 ರವರ ಜಮೀನಿನಲ್ಲಿ ರಸ್ತೆ ಇರುವುದು ಎಂದರೆ ಸರಿ.

ನಮ್ಮ ಮತ್ತು ಪ್ರತಿವಾದಿ 3 ರಿಂದ 5 ರವರು ಮಧ್ಯೆ ರಸ್ತೆಯ ಹಾದಿಯ ಬಗ್ಗೆ ನ್ಯಾಯ ಬಂದಿರುವುದು ಎಂದರೆ ಸರಿ. ಪ್ರತಿವಾದಿ 1 ರವರಿಗೆ ನಾವು ದಾರಿಯ ಹಕ್ಕಿನ ಬಗ್ಗೆ ದಾಖಲೆ ನೀವೇ ಬರೆದುಕೊಟ್ಟಿದ್ದು ಇದಕ್ಕೆ ತಕರಾರು ಬರದಂತೆ ನೀವೇ ನೋಡಿಕೊಳ್ಳಬೇಕು ಎಂದು ಅವರಿಗೆ ಹೇಳಿದ್ದೇವು ಎಂದರೆ ಸರಿ. ಪ್ರತಿವಾದಿ 1 ರವರು ತಾವು ಹಕ್ಕಿನ ಬಗ್ಗೆ ಮಾತ್ರ ಬರೇದುಕೊಟ್ಟಿದ್ದು ಅದರ ರಕ್ಷಣೆ ಮತ್ತು ಜವಾಬ್ದಾರಿ ನಮ್ಮ ಮೇಲೆ ಇರುವುದು ಎಂದರೆ ಸರಿಯಲ್ಲ. ಆದರೆ ಅವರು ನಿಮಗೆ ಹಕ್ಕು ನೀಡಿದ್ದು ಅದಕ್ಕೆ ಸಂಬಂದಪಟ್ಟಂತೆ ನೀವೆ ನ್ಯಾಯಾಲಯಕ್ಕೆ ಹೋಗಿರಿ ಎಂದು ಹೇಳಿರುವರು. ಪ್ರತಿವಾದಿ 1 ರವರು ದಾರಿಯ ಹಕ್ಕಿಗೆ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ಅವರು ಮತ್ತು ಪ್ರತಿವಾದಿ 3 ರಿಂದ 5 ರವರು ದಾರಿಯನ್ನು ಬಂದು ಮಾಡಿರುವರು.

5. ಈ ದಾರಿಯ ವಿಷಯವಾಗಿ ನಾವು ಪ್ರತಿವಾದಿ 1 ರವರ ಜೊತೆ ಜಗಳ ಮಾಡಿದ್ದು ಮತ್ತು ಹಲ್ಲೆ ಮಾಡಿದ್ದೇವೇ ಎಂದರೆ ಸರಿಯಲ್ಲ. ಈ ವಿಷಯವಾಗಿ ಪ್ರತಿವಾದಿ 1 ರವರು ಮುಧೋಳದ ಪೋಲಿಸ್ ಠಾಣೆಯಲ್ಲಿ ನಮ್ಮ ವಿರುದ್ದ ದೂರು ದಾಖಲು ಮಾಡಿವರು ಎಂದರೆ ಸರಿ. ಆದರೆ ಆ ದೂರಿನಲ್ಲಿ ಹೇಳಿರುವ ಸಂಗತಿಗಳು ನಿಜವಿರುವುದಿಲ್ಲ. ಈ ಹಾತ್ ನಾಕಶೆಯಲ್ಲಿ ತೋರಿಸಿರುವಂತೆ ಎನ್ ಹೆಚ್ ಒ ಡಿ ಎಂಬ ಅಕ್ಷರದ ಜಾಗದಲ್ಲಿ ನಾವು ಸುಮಾರು ರೂ. 60 ಸಾವಿರ ಮೌಲ್ಯದ 20 ಟನ್ ಕಬ್ಬ ನ್ನು ನಾಶಪಡಿಸಿದ್ದೇವೆ ಎಂದರೆ ಸರಿಯಲ್ಲ. ಈ 60 ಸಾವಿರ ಹಣ ನೀಡುವ ಜವಾಬ್ದಾರಿ ನಮ್ಮ ಮೇಲೆ ಇದೆ ಎಂದರೆ ಸರಿಯಲ್ಲ. ಈ ಪರಿಹಾರದ ಹಣ ನೀಡುವಂತೆ ಪ್ರತಿವಾದಿ 1 ಮತ್ತು 2 ರವರು ನಮ್ಮ ವಿರುದ್ದ ಎದುರು ಕ್ಲೇಮ ಕೇಳಿರುವರು ಎಂದರೆ ಸರಿಯಲ್ಲ. ಅದು ನಿಜವಿರುವುದಿಲ್ಲ ಎಂದು ಸೂಚಿಸಿರುವರು. ಈ ವಾದ ಪತ್ರದಲ್ಲಿ ಹೇಳಿರವಂತೆ ನಮಗೆ ಈ ದಾವಾ ದಾರಿಯಲ್ಲಿ ವೈವಾಟಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಯಾವುದೇ ಕಾಲಕ್ಕೂ ಈ ದಾವಾ ದಾರಿಯ ಹಕ್ಕಿಗೆ ತೊಂದರೆ ಮಾಡಿರುವುದಿಲ್ಲ ಆದರೂ ಸಹ ಅವರ ವಿರುದ್ದ ಈ ಸುಳ್ಳು ದಾವೆ ದಾಖಲು ಮಾಡಿ ಈ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 3 ರಿಂದ 5 ರವರು ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ